ಶ್ರೀ ಕೆ. ಎಚ್. ಹನುಮೇಗೌಡ.—ಹತ್ತು ಎಕರೆಗಳಿಗೆ ಮೇಲ್ಪಟ್ಟು ಇರುವ ರೈತರು ನೀರಾವರಿ ಪಂಪುಸೆಟ್ಟು ಹಾಕಿಕೊಳ್ಳಬೇಕಾದರೆ ಇವರಿಂದ ಬಂದ ಅರ್ಜಿಗಳನ್ನು ಮೊದಲು ಸೂಪರಿಂಟೆಂಡಿಂಗು ಇಂಜನಿಯರರು ಒಪ್ಪಿ ಆ ನಂತರ ಎಕ್ಸಿಕ್ಯೂಟೀವ್ ಇಂಜನಿಯರಿಗೆ ಇದರ ಬಗ್ಗೆ ಆರ್ಡರು ಕೊಡ ಬೇಕೆಂದು ಸರಕಾರ ಮಾಡಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತವೆ ಮತ್ತು ಬೇಗನೆ ಕೆಲಸಗಳಾಗುವುದಿಲ್ಲ. ಮೊದಲಿಗೆ ಆಯಾ ಡಿವಿಜನ್‌ನಲ್ಲಿರುವ ಎಕ್ಸಿಕ್ಯೂಟೀವ್ ಇಂಜಿನಿಯರೇ ಒಪ್ಪಿದ್ದರೆ ಸಾಕು ಎಂದು ಆರ್ಡರು ಕೊಡುತ್ತಿದ್ದರು. ಆದರೆ ಈಗ ಇದನ್ನು ಸೂಪರಿಂಟೆಂಡಿಂಗು ಇಂಜನಿಯರಿಗೆ ಕಳುಹಿಸಿ ಅಲ್ಲಿಂದ ಎಕ್ಸಿಕ್ಯೂಟಿವ್ ಇಂಜನಿಯರ ಕಡೆ ಬರಬೇಕೆಂದರೆ ಕಾಲ ವಿಳಂಬವಾಗುತ್ತದೆ ಮತ್ತು ಎಷ್ಟೋ ವೇಳೆ ಒದಗಿಸಿರುವ ಹಣ ಕೂಡ ಲಾಪ್ಸ್ ಆಗಿ ರಿಪೇರಿ ಕೆಲಸಗಳೇ ಆಗುವುದಿಲ್ಲ. ಇದಕ್ಕಾಗಿ ಸರಕಾರ ಇದನ್ನು ವಿಚಾರಮಾಡಿ ಮೊದಲು ಇದ್ದಂತೆ ಇದರ ಎಲ್ಲ ಆ ಪ್ರೂವಲ್ ಎಕ್ಸಿಕ್ಯೂಟೀವ್ ಇಂಜನಿಯರ ಕಡೆಗೆ ಇರಲು ತಕ್ಕ ಸೂಚನೆ ಕೊಡುತ್ತಾರೆಯೇ ? ಹಿಂದೆ ಇಂತಹ ವ್ಯವಸ್ಥೆ ಇತ್ತು, ಕೆಲಸಗಳೂ ಬೇಗ ಆಗುತ್ತಿತ್ತು.

ಶ್ರೀ ಎಸ್. ಬಿ. ನಾಗರಾಳ್.—ಇದನ್ನು ಆಲೋಚನೆ ಮಾಡಿ ಹಿಂದೆ ನೀರಾವರಿ ಕೆರೆಗಳ ರಿಪೇರಿ ಕೆಲಸಗಳು ಸರಿಯಾಗಿ ಆಗುತ್ತಿಲ್ಲ ಎಂದು ತಕರಾರುಗಳೂ ಬಂದುದರಿಂದ ಎಕ್ಸಿಕ್ಯೂಟೀವ್ ಇಂಜನಿಯರ್ ಕಡೆಗೆ ಇದ್ದ ಅಧಿಕಾರವನ್ನು ಸೂಪರಿಂಟೆಂಡಿಂಗು ಇಂಜನಿಯರ ಕಡೆಗೆ ವಹಿಸಿದರೆ ಕೆಲಸಗಳು ಚುರುಕಾಗಿ ನಡೆಯುತ್ತವೆ, ಇದಕ್ಕಾಗಿ ಸೂಪರಿಂಟೆಂಡಿಂಗು ಇಂಜನೀಯರವರ ಸರ್ಟಿಫಿಕೇಟು ಪಡೆದು ಎಕ್ಸಿಕ್ಯೂಟೀವ್ ಇಂಜನಿಯರ್‌ರವರು ರಿಪೇರಿ ಇತ್ಯಾದಿ ಕೆಲಸಗಳನ್ನು ಮಾಡಲು ಸಹಾಯವಾಗುತ್ತದೆ ಎಂದು ಮಾಡಲಾಗಿದೆ. ಇದಲ್ಲದೆ ಹಿಂದೆ ಎಕ್ಸಿಕ್ಯೂಟಿವ್ ಇಂಜನಿಯರ ಕಡೆಗೆ ವಹಿಸಿದ್ದ ಕೆಲಸಗಳು ಕೆಲವು ಕಡೆಗಳಲ್ಲಿ ಆಗದೆ ನಿಂತು ಹೋಗುತ್ತಿದ್ದವು. ಇದನ್ನೆಲ್ಲಾ ವಿಚಾರ ಮಾಡಿ ಸೂಪರಿಂಟೆಂಡಿಂಗು ಇಂಜನಿಯರಿಗೆ ಇದನ್ನು ತನಿಖೆಮಾಡಿ ಆ ನಂತರ ಆ ಪ್ರೂವ್ ಮಾಡಬೇಕೆಂದು ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳುವಂತೆ ಎಲ್ಲಾದರೂ ಇಂತಹ ತೊಂದರೆಗಳು ಬಂದಿದ್ದರೆ ಅವರಿಗೆ ತೊಂದರೆ ಇಲ್ಲದಂತೆ ಬೇಗನೆ ಪರಿಶೀಲನೆಮಾಡಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

Compensation for Land Acquired for Chikkakerekodi, Mayasandra

706. M. B. RAMASWAMY (Anekal).—

Will the Minister of State for Minor Irrigation be pleased to state:—

(*a*) whether Government has acquired Survey No. 345 for the construction of Chikkakerekodi, Mayasandra ;

(*b*) if so, when ;

(*c*) whether Government has given compensation for acquiring that land ;

(*d*) the number of petitions made requesting Government for early payment of compensation ;

(*e*) the action taken on those petitions ?

SRI S. B. NAGARAL (Minister of State for Minor Irrigation).—

(*a*) No. The land was under occupation of P. W. D. Land acquisition proceedings have been initiated.

(*b*) Does not arise in view of reply to clause (*a*).

(*c*) Does not arise in view of (*a*).

(*d*) 2 petitions.

(*e*) The Revenue Department has been requested to expedite the land acquisition proceedings.

ಶ್ರೀ ಎಂ. ಬಿ. ರಾಮಸ್ವಾಮಿ —ಉತ್ತರದಲ್ಲಿ ಇಲ್ಲ ಎಂದು ಇದೆ. ಪಿ.ಡಬ್ಯು.ಡಿ. ಇಲಾಖೆಯವರಿಂದ ಇದನ್ನು ಅಕ್ಯುಪೈ ಮಾಡಿ ಎಷ್ಟು ವರ್ಷಗಳಾಗಿವೆ ?

† ಶ್ರೀ ಎಸ್. ಬಿ. ನಗರಾಳ್.—೧೯೬೯ ರಿಂದೀಚೆಗೆ ಇದನ್ನು ಅಕ್ಯುಪೈ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಬಿ ರಾಮಸ್ವಾಮಿ —ಸುಮಾರು ೩೫ ವರ್ಷಗಳಿಂದಲೂ ಇದರ ಬ್ರಿಜ್ ರಿಪೇರಿಯಾಗದೆ ಹಾಗೇ ಇದೆ. ಇದು ಹರಿಜನರ ಜಮೀನು ಎಂದು ಅವರಿಗೆ ಕೊಡಲಾಗಿತ್ತು. ಇದನ್ನು ಪಿ.ಡಬ್ಯು.ಡಿ. ಯವರು ಅಕ್ವೈರ್ ಮಾಡಿಕೊಂಡಿದ್ದಾರೆ. ಇಪ್ಪತ್ತು ವರ್ಷಗಳಿಂದಲೂ ಹರಿಜನರಿಂದ ಅರ್ಜಿಗಳು ಬರುತ್ತಲೇ ಇವೆ. ಇದುವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮುತ್ತು ಇವರಿಗೆ ಸೂಕ್ತವಾದ ಕಾಂಪೆನ್ಸೇಷನ್ ಕೊಡುತ್ತಿರಾ ?

ಶ್ರೀ ಎಸ್. ಬಿ. ನಗರಾಳ್.—ಕಾಂಪೆನ್ಸೆಷನ್ ಕೊಡುವವರು ರೆವಿನ್ಯೂ ಇಲಾಖೆಯವರು ಏಕೆಂದರೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮಾಡುವವರು ಅವರು. ಆದರೆ ಇದರ ಬಗ್ಗೆ ರೂಲ್ಸ್ ಪ್ರಕಾರ ಎಷ್ಟು ಕಾಂಪೆನ್ಸೇಷನ್ ಕೊಡಬೇಕೆಂದು ರೆವೆನ್ಯೂ ಇಲಾಖೆಯವರು ತಿಳಿಸಿದರೆ ಅದನ್ನು ಪಿ.ಡಬ್ಯು.ಡಿ. ಇಲಾಖೆಯ ಮೂಲಕ ಕೊಡುವ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಪಿ. ಡಬ್ಯು. ಡಿ. ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ. ರೆವೆನ್ಯೂ ಇಲಾಖೆಯವರು ಪಿ.ಡಬ್ಯು.ಡಿ. ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ. ಹೀಗೆ ಒಬ್ಬರಿಗೊಬ್ಬರಿಗೆ ಸಂಬಂಧವಿಲ್ಲದಂತೆ ಒಂದು ಇಲಾಖೆಯವರು ಇನ್ನೊಂದು ಇಲಾಖೆ ಮೇಲೆ ಶಕಾಯಿಸುತ್ತಿದ್ದಾರೆ ೨೦-೩೫ ವರ್ಷಗಳಿಂದಲೂ ಇದನ್ನು ಯಾರು ಕೊಡುತ್ತಾರೆ ಎನ್ನುವುದನ್ನು ಇನ್ನೂ ಹೇಳಲಿಲ್ಲ. You say that the land was under occupatio o PWD and land acquisition proceedings have been initiated. ಇಲ್ಲಿ ಭೂಮಿ ಕಳೆದುಕೊಂಡಿರುವ ಹರಿಜನ ರೈತರಿಗೆ ಇನ್ನೂ ಯಾವ ಪರಿಹಾರವನ್ನೂ ಕೊಡಲಿಲ್ಲ. ಬೇಗನೆ ಇವರಿಗೆ ಬೇರೆ ಕಡೆ ಭೂಮಿ ಕೊಡುತ್ತಿರಾ ? ಈಗ ಆದರೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ? ಮತ್ತು ಅದಷ್ಟು ಜಾಗ್ರತೆಯಾಗಿ ಹರಿಜನರಿಗೆ ಕಾಂಪೆನ್ಸೇಷನ್ ಕೊಡುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಸ್. ಬಿ. ನಗರಾಳ್ —ಬೇರೆ ಜಮೀನನ್ನು ಕೊಡುವುದರ ಬಗ್ಗೆ ರೆವೆನ್ಯೂ ಇಲಾಖೆಯವರ ಅರ್ಜಿ ಬಂದಾಗ ಅದನ್ನು ಯೋಚನೆ ಮಾಡುತ್ತಾರೆ. ಪಿ ಡಬ್ಯು.ಡಿ.ಯವರು ಬೇರೆ ಜಮೀನ ಕೊಡುತ್ತಿಲ್ಲ.

Utilisation of Amount of Unclaimed Lottery Prizes

736. SRI K. R. SRINIVASULU NAIDU (Shanthinagar).—
Will the Minister for Finance and Housing be pleased to state.—

(*a*) the purpose for which the Lottery Scheme was started in Karnataka;

(*b*) the number of draws conducted from the inception of the Scheme (yearwise),

(*c*) the gross receipt from the sale of Lottery Tickets, the expenditure incurred and the balance from the inception of the Scheme (Yearwise including cost of establishment);

(*d*) the amount of prizes unclaimed and how such amount has been utilised ?